**ಓ.ಎಸ್ ನಂ.17/2022 ಡಿ.ಡಬ್ಲ್ಯೂ-2 (ರಮೇಶ್ )**

**ಸಾಕ್ಷಿಯನ್ನು ದಿನಾಂಕಃ 07.11.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಂ ಎಸ್ ಎಂ ವಕೀಲರಿಂದಃ**

ನಾನು ಪಿ ಯುಸಿ ಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡದಲ್ಲಿ ಓದಲು ಬರುತ್ತದೆ. ಇಂಗ್ಲೀಷ್ ನಲ್ಲಿ ಓದಲು ಬರುತ್ತದೆ. ನನಗೆ ಪ್ರತಿನಿತ್ಯ ದಿನ ಪತ್ರಿಕೆ ಓದುವ ಅಭ್ಯಾಸ ಇರುವುದಿಲ್ಲ. ನಾನು ಹುಟ್ಟಿದ ಊರು ಹಳ್ಳದ ಮನುಗನಹಳ್ಳಿ ಯಾಗಿರುತ್ತದೆ. ನನಗೆ ನಮ್ಮ ಊರಿನ ಗ್ರಾಮಸ್ಥರ ಪರಿಚಯವಿರುತ್ತದೆ. ಅದೇ ರೀತಿ ನಮ್ಮ ಜಮೀನಿನ ಅಕ್ಕ ಪಕ್ಕದ ಜಮೀನಿನ ಮಾಲೀಕರ ಪರಿಚಯ ಇರುತ್ತದೆ. ವಾದಿಗಳ ತಂದೆಯ ಪರಿಚಯ ಇರುವುದಿಲ್ಲ. ನನಗೆ ಪ್ರತಿವಾದಿ 1 ರಿಂದ 9 ರವರುಗಳ ಪರಿಚಯ ಇರುತ್ತದೆ, 10 ರಿಂದ 21 ರ ವರಗಿನ ಪ್ರತಿವಾದಿಗಳ ಪರಿಚಯ ಇರವುದಿಲ್ಲ. 5 ರಿಂದ 7 ಪ್ರತಿವಾದಿಗಳ ತಂದೆಯ ಸಹೋದರರ ತಿಳಿದಿರುತ್ತದೆ. ಅವರುಗಳು 1. ರಾಜಣ್ಣ 2. ಶಂಕರ್ ಮತ್ತು 3. ರಾಜಶೇಖರ್.

ನಾನು ಖರೀದಿಸಿದ ಜಮೀನು ಮೂಲ ಶಂಕರಪ್ಪ ನವರಿಗೆ ಸೇರಿರುತ್ತದೆ. ಅವರಿಗೆ ಸಾಗುವಳಿ ಮೂಲಕ 1955-56 ನೇ ಸಾಲಿನಲ್ಲಿ ಬಂದಿರುತ್ತದೆ. ಸದರಿ ಸಾಗುವಳಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿ 5 ರಿಂದ 7 ರವರಿಂದ ಜಮೀನನ್ನು ಖರೀದಿಸುವ ಸಮಯದಲ್ಲಿ ಸದರಿ ಸಾಗುವಳಿ ಪತ್ರವನ್ನು ಪಡೆದುಕೊಂಡಿರುವುದಿಲ್ಲ.

ಪ್ರತಿವಾದಿ 5 ರಿಂದ 7 ರವರ ತಂದೆಯವರ ವಂಶವೃಕ್ಷವನ್ನು ನಾನು ಪಡೆದುಕೊಂಡಿರುವುದಿಲ್ಲ. ನಾನು ಖರೀದಿಸಿರುವ ಆಸ್ತಿಯು ಪ್ರತಿವಾದಿ 5 ರಿಂದ 7 ರವರು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಶಿವಣ್ಣ, ನಾಗಣ್ಣ ಮತ್ತು ಸೋಮಶೇಖರಪ್ಪ ರವರ ಮಧ್ಯೆ ಎಷ್ಟು ವರ್ಷಗಳ ಹಿಂದೆ ಭಾಗವಾಗಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸಾಕ್ಷಿಗೆ ಅವರು ಹಾಜರುಪಡಿಸಿದ ಪ್ರಮಾಣ ಪತ್ರದ ಖಂಡಿಕೆ 22 ರಲ್ಲಿ ಹೇಳಿರುವಂತೆ ಪ್ರಮಾಣ ಪತ್ರದಲ್ಲಿ ಹೇಳಲು ಪ್ರತಿವಾದಿ 22 ರವರು ನಿಮಗೆ ತಿಳಿಸಿರುತ್ತಾರೆಯೇ ಎಂದರೆ ಸಾಕ್ಷಿಯು ಪರತಿವಾದಿ 22 ರವರು ನನಗೆ ಹೇಳಿರುವುದಿಲ್ಲ ಆದರೆ ನನಗೆ ತಿಳಿದಿರುವುದರಿಂದ ಆ ರೀತಿ ಹೇಳಲಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ 22 ರಲ್ಲಿ ಹೇಳಿರುವ ವಿಷಯಗಳು ಸತ್ಯವಾಗಿರುತ್ತವೆ.

ವಾದಿಗಳು ಅವರ 1/3 ರ ಭಾಗದ ಹಕ್ಕನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ನನ್ನ ವಕೀಲರಿಗೆ ಪ್ರಮಾಣ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ.

ದಾವಾ ಐಟಂ ನಂ.2 ರ ಸ್ವತ್ತನ್ನು ನಾನು ದಿಃ 25.01.2021 ರಂದು ಖರೀದಿಸಿರುತ್ತೇನೆ. ಸದರಿ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಪರವಾಗಿ ಆರ್. ಟಿ. ಸಿ. ಗಳು, ಎಂ.ಆರ್. ಗಳು, ಕ್ರಯಪತ್ರಗಳನ್ನು ಗುರುತಿಸಿಕೊಂಡಿರುತ್ತೇನೆ. ಸಾಕ್ಷಿಗೆ ದಾಖಲಾತಿಗಳನ್ನು ತೋರಿಸಿ ನೀವು ಹಾಜರುಪಡಿಸಿರುವ ದಾಖಲಾತಿಗಳು ಇವೆಯೇ ಎಂದು ಕೇಳಲಾಗಿ ಸಾಕ್ಷಿಯು ನಾನು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ, ಪ್ರತಿವಾದಿ 22 ಮತ್ತು ನಾನು ಒಟ್ಟಿಗೆ ದಾವೆಯನ್ನು ನೋಡಿಕೊಳ್ಳುತ್ತಿರುವುದರಿಂದ ಪ್ರತಿವಾದಿ 22 ರವರೇ ಆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 5 ರಿಂದ 7 ರವರ ವಂಶವೃಕ್ಷ ವನ್ನು ನ್ಯಾಯಾಲಯಕ್ಕ ಹಾಜರುಪಡಿಸಿರುವುದಿಲ್ಲ. ವಾದಿ ಮತ್ತು ಪ್ರತಿವಾದಿ 1 ರಿಂದ 21 ರವರುಗಳ ಮಧ್ಯೆ ಆಗಿರುವಂತಹ ವಿಭಾಗ ಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ. ನಾನು ಸರ್ವೆ ನಂ.82/2 ರ ಜಮೀನನ್ನು

ಖರೀದಿಸಿರುತ್ತೇನೆ. ನಾನು ಖರೀದಿಸುವ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿ 1 ರಿಂದ 21 ರವರಿಗೆ ಸಂಬಂದಿಸಿದ ವಿಭಾಗ ಪತ್ರ, ಈಸಿ, ಆರ್ ಟಿ ಸಿ, ಎಂ ಆರ್, ಪಾರಂ ನಂ.5 ಮತ್ತು 6 ಮತ್ತು ಕ್ರಯಪತ್ರಗಳನ್ನು ಪರಿಶೀಲಿಸಿರುತ್ತೇನೆ, ಮತ್ತು ಆ ದಾಖಲಾತಿಗಳ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು 1974 ರಿಂದ ಆಗಿರುವಂತಹ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಆ ದಾಖಲಾತಿಗಳನ್ನು ನಾನು ಜಮೀನನ್ನು ಖರೀಸುವ ಸಮಯದಲ್ಲಿ ಅಂದರೆ 2021 ರಲ್ಲಿ ಪರಿಶೀಲಿಸಿರುತ್ತೇನೆ. ಸದರಿ 2021 ರಿಂದ ಪರಿಶೀಲಿಸಿದ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ವಕೀಲರ ಸಲಹೇಯ ಮೇರೆಗೆ ಪರಿಶೀಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವಾ ಐಟಂ ನಂ2 ರ ಆಸ್ತಿಯನ್ನು ಖರೀದಿಸಿದ ನಂತರ ಸದರಿ ಜಮೀನಿಗೆ ಸಂಬಂಧಿಸಿದಂತೆ ತಕರಾರು ಇರುವುದರ ಬಗ್ಗೆ ದಿನ ಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆಯನ್ನು ಮಾಡಿರುವುದಿಲ್ಲ, ಸಾಕ್ಷಿಯು ಮುಂದುವರಿದು ಆ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲ ಮತ್ತು ನಮ್ಮ ಜಮೀನಿನ ಅಕ್ಕ ಪಕ್ಕದವರು ಆಗಿದ್ದರಿಂದ ಯಾವುದೇ ಪ್ರಕಟಣೆ ಮಾಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿ 1 ರಿಂದ 21 ರವರುಗಳಿಗೆ ಯಾವುದೇಲ್ಲಾ ಆಸ್ತಿಗಳು ಇರುತ್ತವೆ ಎಂದು ತಿಳಿದುಕೊಂಡಿರುತ್ತೇನೆ. ಮನೆ ಮತ್ತು ಜಮೀನುಗಳು ಇರುತ್ತೆ ಎಂದು ತಿಳಿದಕೊಂಡಿರುತ್ತೇನೆ. ಅವರುಗಳಿಗೆ 9 ಎಕರೆ 10 ಜಮೀನು ಮತ್ತು ಮನೆ ಇತ್ತು ಎಂದು ನುಡಿಯುತ್ತಾರೆ.

ಹಳ್ಳದಮನುಗನಹಳ್ಳಿ ಗ್ರಾಮದ ಸರ್ವೆ ನಂ.82/2 ರಲ್ಲಿ ಒಟ್ಟು 9 ಎಕರೆ 10 ಗುಂಟೆ ಜಮೀನು ಇತ್ತು. ಅದೇ ರೀತಿ ಸದರಿ ಗ್ರಾಮದ ಸ. ನಂ 82/3 ರಲ್ಲಿ 1 ಎಕರೆ 15 ಗುಂಟೆ ಜಮೀನು ಇರುತ್ತದೆ. ಸ. ನಂ.82/5 ರಲ್ಲಿ 2 ಎಕರೆ 10 ಗುಂಟೆ, 82/3 ರಲ್ಲಿ 1 ಎಕರೆ 20 ಗುಂಟೆ, 82/2 ರಲ್ಲಿ 1 ಎಕರೆ 20 ಗುಂಟೆ, 82/1 ರಲ್ಲಿ 2 ಎಕರೆ 25 ಗುಂಟೆ ಜಮೀನು ಇರುತ್ತದೆ. ವಾದಿ ಮತ್ತು ಪ್ರತಿವಾದಿ 1 ರಿಂದ 21 ರವರುಗಳ ಮದ್ಯೆ ಯಾವುದೇ ವಿಭಾಗವಾಗಿಲ್ಲದೆ ಇರುವುದರಿಂದ ಮತ್ತು ಪ್ರತಿವಾದಿ 5 ರಿಂದ 7

ರವರಿಗೆ ದಾವಾ ಐಟಂ ನಂ 2 ರ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದೆ ಇರುವುದರಿಂದ ಅವರಿಗೆ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಪ್ರತಿವಾದಿ 5 ರಿಂದ 7 ರವರ ಜೊತೆಯಲ್ಲಿ ಅಕ್ರಮವಾಗಿ ಸೇರಿಕೊಂಡು ಶಾಮೀಲಾಗಿ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ